**<u>ದಿನಾಂಕಃ 16.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಎಸ್ ಎಸ್ ವಕೀಲರಿಂದಃ-</u>**

ವಾದಿಯರು ನನ್ನ ವಿರುದ್ದ ಏನು ಪರಿಹಾರ ಬೇಡಿ ದಾವೆ ಮಾಡಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ದಾವಾ ಸ್ವತ್ತಿನಲ್ಲಿ ಮನೆ ಕಟ್ಟುವಾಗ ಸದರಿ ಜಾಗ ಗೋಮಾಳ ಸ್ವತ್ತು ಎಂದು ವಾದಿಯರು ನಮಗೆ ಮನೆ ಕಟ್ಟದಂತೆ ತಡೆದು ಸದರಿ ದಾವೆ ತಂದಿರುತ್ತಾರೆ ಎಂದು ನುಡಿಯುತ್ತಾರೆ. ತಮ್ಮ ವಕೀಲರು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ತಕರಾರು ಪತ್ರ ತಯಾರು ಮಾಡಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಪ್ರತಿವಾದ ಪತ್ರವನ್ನು ನನ್ನ ಮತ್ತು 1 ನೇ ಪ್ರತಿವಾದಿಯ ಪರವಾಗಿ ಸಲ್ಲಿಸಿರುತ್ತೇನೆ. ನಾನು 12 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ನಾನು ಗೋಮಾಳ ಜಾಗದಲ್ಲಿ ಮನೆ ಕಟ್ಟುತ್ತಿದ್ದೇನೆ ಎಂದು ವಾದಿಯರು ಬಂದು ತಕರಾರು ಮಾಡಿರುತ್ತಾರೆ ಎಂದು ಪ್ರ2ವಾದ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮುಖ್ಯ ವಿಚಾರಣೆಯನ್ನು ನನ್ನ ಒಬ್ಬನ ಪರವಾಗಿ ಬರೆಸಿರುತ್ತೇನೆ ಎನ್ನುತ್ತಾರೆ. ಗೋಮಾಳದ ಜಾಗದಲ್ಲಿ ಮನೆ ಕಟ್ಟುತ್ತಿದ್ದೇನೆಂದು ವಾದಿಯರು ನನಗೆ ಬಂದು ತೊಂದರೆ ಕೊಡುತ್ತಿದ್ದಾರೆಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿಯು ಹೇಳಿದ್ದೇನೆ ಎನ್ನುತ್ತಾರೆ. ವಾದಿಯರು ಯಾವ ಸರ್ವೆ ನಂಬರ್ ಮತ್ತು ಎಷ್ಟು ವಿಸ್ತೀರ್ಣ ಕ್ಕೆ ಕೇಸು ಮಾಡಿದ್ದಾರೆ ಎಂದರೆ ಸಾಕ್ಷಿಯು ಸರ್ವೆ ನಂಬರ್ ಸರ್ವೆ ನಂ. 90/ಪಿ 10ರ ವಿಸ್ತೀರ್ಣ 4 ಎಕರೆ 1 ಗುಂಟೆ ಎನ್ನುತ್ತಾರೆ. ಸದರಿ ಸರ್ವೆ ನಂಬರ್ ಜಮೀನು ಮೂಲ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿಯು ಗೋವಿಂದನಾಯ್ಕ ಬಿನ್ ಲೇಟ್ ಕುಂಟರಾಮಯ್ಯ ರವರಿಗೆ ಸೇರಿದ್ದು ಎನ್ನುತ್ತಾರೆ. ಸದರಿ ಗೋವಿಂದನಾಯ್ಕ ಬಿನ್ ಲೇಟ್ ಕುಂಟರಾಮಯ್ಯ ರವರಿಗೆ ದಾವಾ ಆಸ್ತಿ ಹೇಗೆ ಬಂದಿತ್ತು ಎಂದು ಗೊತ್ತಾ ಎಂದರೆ ಸಾಕ್ಷಿಯು ಸರ್ಕಾರದಿಂದ ಮಂಜೂರು ಆಗಿರುತ್ತದೆ ಎನ್ನುತ್ತಾರೆ.

ನಿಡಿ 2 ನೊಂದಾಯಿತ ಕರಾರು ಪತ್ರ ಸ್ವಾಧೀನ ರಹಿತ ಕ್ರಯದ ಕರಾರು ಪತ್ರ ಎಂದರೆ ಸರಿ. ಕರಾರುಪತ್ರದ ಅವಧಿ 3 ವರ್ಷ ಎಂದರೆ ಸರಿ. ಕ್ರಯ ಕರಾರುಪತ್ರ ಆದ ನಂತರ 3 ವರ್ಷದ ಒಳಗೆ ಕ್ರಯ ಪತ್ರ ಮಾಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಹಾಜರು ಮಾಡಿರುವ ನಿ ಡಿ 3 ಜಿ ಪಿ ಎ ಕ್ರಯ ಕರಾರುಪತ್ರ ಆದ ದಿನವೇ ಮಾಡಿಕೊಂಡಿದ್ದು ಎಂದರೆ ಸರಿ. ನಿಡಿ 3 ರಲ್ಲಿ ಇರುವ ಷರತ್ತುಗಳನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಡಿ 3 ರಲ್ಲಿರುವ ನಿಬಂಧನೆಗಳ ಪ್ರಕಾರ ನಾನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಯಲ್ಲಿ

ನಾನು ಮನೆ ಕಟ್ಟಲು ಆರಂಭಿಸಿದ್ದೇನೆ ಎನ್ನುತ್ತಾರೆ. ನಿ ಡಿ3 ಜಿ ಪಿ ಎ ಪತ್ರದಲ್ಲಿ ದಾವಾ ಆಸ್ತಿಯನ್ನು ನನ್ನ ಸ್ವಾ ಧೀನಕ್ಕೆ ಕೊಟ್ಟ ಬಗ್ಗೆ ಒಕ್ಕಣೆ ಇಲ್ಲ ಎಂದರೆ ಸರಿಯಲ್ಲ, ದಾವಾ ಸರ್ವೆ ನಂಬರ್ ಆಸ್ತಿಯಲ್ಲಿ ಮನೆ ಕಟ್ಟುತ್ತಿದದ್ದೆ ಎಂದಹೇಳಿದ್ದು ಸಂಬಂದಪಟ್ಟ ಇಲಾಖೆಯಿಂದ ಪರವಾನಗಿ ಪಡೆದಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ, ಪರವಾನಗಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ವಾದಿಯು ನ್ಯಾಯಾಲಯಕ್ಕೆ ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಾವಾ ಆಸ್ತಿಯು ರಾಂಪುರ ಗ್ರಾಮದ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿಯಲ್ಲ. ಹಾಗಾದರೆ ತಾವು ಮನೆ ಕಟ್ಟಲು ಯಾವ ಇಲಾಖೆಯಿಂದ ಪರವಾನಗಿ ಪಡೆದಿದ್ದೀರಾ ಎಂದರೆ ಸಾಕ್ಷಿಯು ಪಿಡಬ್ಲ್ಯೂ ಡಿ ಇಂದ ಎನ್ನುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಚೋಳಮಾರನಹಳ್ಳಿ ಗ್ರಾಮ ರಾಂಪುರ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಬರುತ್ತದೆ ಎಂದು ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೋಳಮಾರನಹಳ್ಳಿ ಗ್ರಾಮದ ಸರ್ವೆ ನಂ.90/ಪಿ10 ಜಾಗದಲ್ಲಿ ಮನೆ ಕಟ್ಟಲು ರಾಂಪುರ ಗ್ರಾಮ ಪಂಚಾಯಿತಿಯಿಂದ ಯಾವುದೇ ಪರವಾನಗಿ ಕೊಟ್ಟಿಲ್ಲ ಎಂದು ದಿಃ 20.09.2017 ರಂದು ರಾಂಪುರ ಗ್ರಾಮ ಪಂಚಾಯಿತಿಯಿಂದ ಹಿಂಬರಹ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ತಾವು ಮೂಲ ಎಲ್ಲಿಯವರು ಎಂದರೆ ಸಾಕ್ಷಿ ರಾಮನಗರದವರು ಎಂದು ನುಡಿದು, ಪ್ರಸ್ತುತ ಚೋಳಮಾರನಹಳ್ಳಿ ಗ್ರಾಮದಲ್ಲಿ ವಾಸ ಇರುತ್ತೇವೆ ಎಂದು ನುಡಿಯುತ್ತಾರೆ. ನಾನು ಬಾಡಿಗೆಗೆ ಆಟೋ ಓಡಿಸುವ ಕೆಲಸ ಮಾಡುತ್ತೇನೆ. ತುಮಕೂರು ಜಿಲ್ಲೆಯ ಕಾಮನದುರ್ಗ ಗ್ರಾಮ, ನಾಗಲಮಡಿಕೆ ಹೋಬಳಿ, ಪಾವಗಡ ತಾಲ್ಲೂಕು ತಮಗೆ ಗೊತ್ತಾ ಎಂದರೆ ಸಾಕ್ಷಿಯು ಗೊತ್ತು ಎನ್ನುತ್ತಾರೆ. ಸದರಿ ಗ್ರಾಮದಲ್ಲಿ ತಮ್ಮ ಸಂಬಂಧಿಕರು ಇದ್ದಾರಾ ಎಂದರೆ ಸಾಕ್ಷಿ ತಮ್ಮ ತಂದೆ ಇದ್ದಾರೆ ಎನ್ನುತ್ತಾರೆ. ನಾನು ಹುಟ್ಟಿ ಬೆಳೆದದ್ದು ಎಲ್ಲಾ ಕಾಮನದುರ್ಗ ಗ್ರಾಮದಲ್ಲಿ ಎಂದರೆ ಸರಿ. ನನಗೆ ಚೋಳಮಾರನಹಳ್ಳಿ ಗ್ರಾಮದಲ್ಲಾಗಲೀ ಅಥವಾ ಕನ್ನಮಂಗಲ ಗ್ರಾಮದಲ್ಲಾಗಲೀ ಯಾವುದೇ ವ್ಯವಸಾಯ ಜಮೀನು ಇಲ್ಲ ಎಂದರೆ ಸರಿ.

ದಾವಾ ಸರ್ವೆ ನಂಬರ್ ಜಮೀನಿನ 0.05 ಗುಂಟೆ ಜಮೀನಿನ ವಿಸ್ತೀರ್ಣ ದಲ್ಲಿ ಚರ್ಚ್ ನಿರ್ಮಾಣ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಕಟ್ಟಡ ಕಟ್ಟಲು ಸದರಿ ಸರ್ವೆ ನಂಬರ್ ಆಸ್ತಿಯಲ್ಲಿ ಜಲ್ಲಿ , ಮರಳು ಮತ್ತು ಕಟ್ಟಡ ಕಟ್ಟುವ ಸಾಮಗ್ರಿಗಳನ್ನು ಶೇಖರಣೆ ಮಾಡಿದ್ದೆವು ಎಂದರೆ ಸರಿ. ನಿಪಿ 4 ರಿಂದ 12 ರ ಫೋಟೋಗಳಲ್ಲಿ ಕಾಣುವಂತೆ ಅಲ್ಲಿದ್ದ ಮರಗಳನ್ನು ಕುಯ್ಯಿಸಿರುತ್ತೇವೆ ಎಂದರೆ ಸಾಕ್ಷಿ ನಾವು ಯಾವುದೇ ಮರಗಳನ್ನು ಕುಯ್ಯಿಸಿರುವುದಿಲ್ಲ ಎನ್ನುತ್ತಾರೆ. 0.05 ಗುಂಟೆಯಲ್ಲಿ ಕಟ್ಟಡ ಕಟ್ಟುತ್ತಿರುವ ಜಾಗದಲ್ಲಿ ಅಲ್ಲಿದ್ದ ಮರಗಳನ್ನು ಕುಯ್ಯಿಸಿ ಸಾಗಿಸಿರುತೆನಿತವೆ ಎಂದರೆ ಸರಿಯಲ್ಲ. ದಾವಾ ಸರ್ವೆ

ನಂಬರ್ ಜಮೀನಿನ 0.05 ಗುಂಟೆಯಲ್ಲಿ ಅನಧಿಕೃತವಾಗಿ ಮತ್ತು ಯಾವುದೇ ಇಲಾಖೆಯಿಂದ ಪೂರ್ವಾನಮತಿ ಪಡೆಯದೇ ಚರ್ಚ್ ನಿರ್ಮಾಣ ಮಾಡುತ್ತಿದ್ದೇವೆ ಎಂದು ನನ್ನ ವಿರುದ್ಧ ಜಿಲ್ಲಾ ಲೋಕಾಯುಕ್ತ ಕಛೇರಿಗೆ ದೂರು ಸಲ್ಲಿಸಲಾಗಿತ್ತು ಎಂದರೆ ಸರಿ. ಚೋಳಮಾರನಹಳ್ಳಿ ಗ್ರಾಮದಲ್ಲಿ ಅನಧಿಕೃತವಾಗಿ ಚರ್ಚನ್ನು ನಿರ್ಮಾಣ ಮಾಡುತ್ತಾ ಮತಾಂತರ ಮಾಡುವಲ್ಲಿ ನಿರತನಾಗಿದ್ದೇನೆ ಎಂದು ನನ್ನ ವಿರುದ್ಧ ಪೋಲೀಸ್ ಪಿರ್ಯಾದು ದಾಖಲಾಗಿ ಪೊಲೀಸರು ನನ್ನನ್ನು ದಸ್ತಗಿರ ಮಾಡಿದ್ದರು ಎಂದರೆ ಸರಿ. ನಿಡಿ 2 ಕ್ರಯದ ಕರಾರು ಪತ್ರ ಮತ್ತು ನಿಡಿ 3 ಜಿ ಪಿ ಎ ಪತ್ರ ದಾವಾ ಆಸ್ತಿಯ ಒಟ್ಟು ಜಮೀನಿನ ಪೈಕಿ 0.05 ಗುಂಟೆಗೆ ಮಾತ್ರ ಎಂದರೆ ಸರಿ. ಇವತ್ತಿಗೂ ಕೂಡಾ ದಾವಾ ಸರ್ವೆ ನಂ.90/ಪಿ10 ವಿಸ್ತೀರ್ಣ 4 ಎಕರೆ 1ಗುಂಟೆ 1 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರ್ ವಿಸ್ತೀರ್ಣದಲ್ಲಿ 0.05 ಗುಂಟೆ ಜಮೀನನ್ನು ತಮಗೆ ಮನೆ ಕಟ್ಟಿಕೊಳ್ಳುವುದಕ್ಕಾಗಲೀ ಅಥವಾ ಚರ್ಚ್ ನಿರ್ಮಿಸಲು ನನಗೆ ಯಾವುದೇ ಸ್ವಾಧೀನ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ನ 0.05 ಗುಂಟೆ ವಿಸ್ತೀರ್ಣದಲ್ಲಿ ಕಟ್ಟಡ ಕಟ್ಟಲು ಯಾವುದೇ ಮಾಲೀಕತ್ವದ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಕುಟುಂಬಕ್ಕೆ ದಾವಾ ಸರ್ವೆ ನಂಬರ್ ಆಸ್ತಿಯನ್ನು ವ್ಯವಸಾಯದ ಉದ್ದೇಶಕ್ಕೆ ಸರ್ಕಾರದ ಜಾಗದಿಂದ ಮಂಜೂರು ಮಾಡಿದ ಆಸ್ತಿಯೇ ಹೊರತು ಯಾವುದೇ ಕಟ್ಟಡ ಕಟ್ಟಲು ಮತ್ತು ಮಾರಾಟ ಮಾಡುವ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ಜಮೀನಿನಲ್ಲಿ 0.05 ಗುಂಟೆ ವಿಸ್ತೀರ್ಣವನ್ನು ಹೇಗಾದರೂ ಮಾಡಿ ಲಪಟಾಯಿಸಬೇಕು ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ